# ಐಸಿಟಿಯೊಂದಿಗೆ ಬಿಐಇಟಿ ನೂತನ ಒಪ್ಪಂದ

ದಾವಣಗೆರೆ, ಫೆ. 22- ವಿದ್ಯಾರ್ಥಿಗಳ ಸರ್ವತೋಮುಖ ಶಿಕ್ಷಣಕ್ಕೆ ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯ ಫೆ. 17 ರಂದು ಐಸಿಟಿ ಕಂಪನಿಯೊಂದಿಗೆ ಒಪ್ಪಂದ ಮಾಡಿಕೊಂಡಿದೆ.

ನಾಗಾಲೋಟದಿಂದ ಹೊಸ ಹೊಸ ಆಯಾಮಗಳತ್ತ ಮುಖಮಾಡಿ ನವ ನವೀನ ಬದುಕಿನತ್ತ ಸತತವಾಗಿ ಚಲಿಸುತ್ತಿರುವ ಇಂದಿನ ಹೊಸಯುಗ ಪ್ರತಿಕ್ಷಣ ಹೊಸದನ್ನೇ ಬಯಸುತ್ತದೆ ಮತ್ತು ವಿದ್ಯಾರ್ಥಿಗಳಲ್ಲಿ ಅಪಾರವಾದ ಸ್ಪರ್ಧೆಯನ್ನು ನಿರ್ಮಿಸಿದೆ.

ಈ ಸ್ಪರ್ಧಾತ್ಮಕ ಯುಗಕ್ಕೆ ಹೊಂದಿಕೊಂಡು ಬದುಕನ್ನು ರೂಪಿಸಲು ವಿದ್ಯಾರ್ಥಿಗಳಿಗೆ ಕೇವಲ ಪರಿಕ್ರಮ ಶಿಕ್ಷಣ ಸಾಲದಾಗಿದ್ದು, ವಿದ್ಯಾರ್ಥಿಗಳು ಸಂವಹನಾಶೀಲತೆ, ಸಮಯ ನಿರ್ವಹಣಾ ಕೌಶಲ್ಯ, ಒಟ್ಟಾಗಿ ತಂಡದಲ್ಲಿ ಕೆಲಸ ಮಾಡುವ ಕೌಶಲ್ಯ, ಒತ್ತಡ ನಿರ್ವಹಣಾ ಸಾಮರ್ಥ್ಯ ಇತ್ಯಾದಿ ಅನೇಕ ಪಠ್ಯೇತರ ಮೃದು ಕೌಶಲ್ಯಗಳನ್ನು ಬೆಳೆಸಿಕೊಳ್ಳಬೇಕಾಗುತ್ತದೆ. ಇದನ್ನು ಮನಗಂಡು ಬಿಐಇಟಿ ಐಸಿಟಿ ಕಂಪನಿಯೊಂದಿಗೆ ಅಸೋಸಿಯೇಟ್ ಸದಸ್ಯತ್ವ ಒಪ್ಪಂದ ಮಾಡಿಕೊಂಡಿದೆ.

ಈ ಒಪ್ಪಂದ ಮುಂದಿನ ಐದು ವರ್ಷಗಳ ಕಾಲ ಜಾರಿಯಲ್ಲಿರುತ್ತದೆ.ಇದಲ್ಲದೆ ಐಸಿಟಿ ಕಂಪನಿಯು ಬಿಐಇಟಿ ವಿದ್ಯಾರ್ಥಿಗಳಿಗೆ ನೇಮಕಾತಿ ಪ್ಲಾಟ್‌ಫಾರ್ಮ್ ಒದಗಿಸಿದೆ. ಈಗಾಗಲೇ 100 ವಿದ್ಯಾರ್ಥಿಗಳು ಅರ್ನ್ಸ್ಟ್



ಅಂಡ್ ಎಂಗ್, ಟಾಟಾ ಎಲೆಕ್ಸಿ ಇನ್ಸರೇಜ್ ಇತ್ಯಾದಿ ಕಂಪನಿಗಳಲ್ಲಿ ನೇಮಕಾತಿ ಹೊಂದಲು ನೆರವಾಗಿದೆ.

ಬಿಐಇಟಿ ಕಾಲೇಜಿನ ಪ್ರಾಚಾರ್ಯ ಡಾ. ಹೆಚ್.ಬಿ. ಅರವಿಂದ್, ಐಸಿಟಿ ಕಂಪನಿಯ ರಾಜ್ಯ ಪ್ರಮುಖರಾದ ವಿಷ್ಣುಪ್ರಸಾದ್, ಕಂಪನಿಯ ಜಕಾವುಲ್ಲಾ ಇವರು ಒಪ್ಪಂದಕ್ಕೆ ಸಹಿ ಹಾಕಿದರು.

ಈ ಸಂದರ್ಭದಲ್ಲಿ ಕಾಲೇಜಿನ ನಿರ್ದೇಶಕ ಪ್ರೊ. ವೈ. ವೃಷಭೇಂದ್ರಪ್ಪ, ನಿಯೋಜನಾ ಡೀನ್ ಡಾ. ಸಿ.ಆರ್. ನಿರ್ಮಲ, ಕಾಲೇಜಿನ ವಿವಿಧ ವಿಭಾಗಗಳ ಮುಖ್ಯಸ್ಥರು ಹಾಜರಿದ್ದರು.

ಈ ಸಾಧನೆಗೆ ಬಾಪೂಜಿ ವಿದ್ಯಾಸಂಸ್ಥೆ ಗೌರವ ಕಾರ್ಯದರ್ಶಿ ಡಾ. ಶಾಮನೂರು ಶಿವಶಂಕರಪ್ಪ , ಜಂಟಿ ಕಾರ್ಯದರ್ಶಿ ಎಸ್.ಎಸ್. ಮಲ್ಲಿಕಾರ್ಜುನ್ ಅಭಿನಂದಿಸಿದ್ದಾರೆ.

# ತಿಳುವಳಿಕೆಯೊಂದಿಗೆ ಅಳವಡಿಕೆ ಕೌಶಲ್ಯವೂ ಅವಶ್ಯ



## ಬಾಪೂಜಿ ಎಂ. ಬಿ. ಎ. ಸಂಸ್ಥಾಪನಾ ದಿನಾಚರಣೆಯಲ್ಲಿ ಅಜಯ್ ಕುಮಾರ್ ಗುಪ್ತ

ದಾವಣಗೆರೆ, ಫೆ. 22- ತಂತ್ರಜ್ಞಾನವಾಗಲೀ, ವಾಣಿಜ್ಯ ಜ್ಞಾನವಾಗಲೀ, ನಿರ್ವಹಣಾ ಜ್ಞಾನವಾಗಲೀ ತಿಳುವಳಿಕೆ ಇದ್ದರೆ ಸಾಲದು, ಅಳವಡಿಕೆಯ ಕೌಶಲ್ಯವೂ ಅವಶ್ಯ ಎಂದು ಗ್ರಾಸಿಮ್ ಕೈಗಾರಿಕೆಯ ವಿಭಾಗದ ಮುಖ್ಯಸ್ಥ ಹಿರಿಯ ಅಧ್ಯಕ್ಷ ಅಜಯ್ ಕುಮಾರ್ ಗುಪ್ತ ಹೇಳಿದರು.

ಬಾಪೂಜಿ ಮ್ಯಾನೇಜ್ಮೆಂಟ್ ಕಾಲೇಜಿನ 25 ನೇ ಸಂಸ್ಥಾಪನಾ ದಿನ ಹಾಗೂ ನೂತನ ವಿದ್ಯಾರ್ಥಿಗಳಿಗೆ ಸ್ವಾಗತ ಕೋರುವ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಯಶಸ್ಸಿನ ಗಾಥೆ ಆಗಬೇಕೆಂದರೆ ಮೊದಲು ವೈಯಕ್ತಿಕ ಛಾಪು ಮೂಡಿಸಬೇಕು. ನಂತರ ಸಂಸ್ಥೆಯ ಛಾಪು ಮೂಡಿಸಬೇಕು, ಅದಕ್ಕೂ ಪೂರ್ವವಾಗಿ ಏನು ಸಾಧಿಸಬೇಕೆಂಬುದರ ಸ್ಪಷ್ಟ ಅರಿವು ಬೇಕು. ನಂತರ ಅದಕ್ಕೆ ಪೂರಕವಾಗಿ ಏನು ಮಾಡಬೇಕೆಂಬುದರ ಅರಿವನ್ನು ಸಹವರ್ತಿಗಳಿಗೆ ಕೊಡಬೇಕು ಎಂದು ಮ್ಯಾನೇಜ್ಮೆಂಟ್ ವಿದ್ಯಾರ್ಥಿಗಳಿಗೆ ಕರೆಕೊಟ್ಟರು.

ಮತ್ತೋರ್ವ ಮುಖ್ಯ ಅತಿಥಿ, ಹರಿಹರದ ಸಿಂಥೆಟಿಕ್ ಇಂಡಸ್ಟ್ರೀಸ್ ನ ಜನರಲ್ ಮ್ಯಾನೇಜರ್ ಎಲ್.ಕೆ. ನಾಗರಾಜ್ ಮಾತನಾಡಿ, ಸಂವಹನ ಕೌಶಲ್ಯ, ಮಾನವ ಸಂಪನ್ಮೂಲ ಬಳಕೆ, ನಾಯಕತ್ವ ಗುಣ ಅತ್ಯವಶ್ಯ. ಅಂಕ ಗಳಿಕೆಗೆ ಕೊಡುವಷ್ಟೇ ಗಮನವನ್ನು ಕೈಗಾರಿಕಾ ಕೌಶಲ್ಯಕ್ಕೂ ಕೊಡಬೇಕು. ಅದರಲ್ಲೂ ಬಹುಮುಖಿ, ಬಹುವಿಧ ಕೌಶಲ್ಯಗಳು ಬೇಕು ಎಂದರು.

ಉದ್ಘಾಟನಾ ನುಡಿಗಳನ್ನಾಡಿದ ಬಾಪೂಜಿ ತಾಂತ್ರಿಕ ಮತ್ತು ತಂತ್ರಜ್ಞಾನ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ. ಹೆಚ್. ಬಿ. ಅರವಿಂದ್, ಆಲೋಚನೆಗಳು ಸ್ಥಳೀಯ ಸಮಸ್ಯೆಗಳ ಮಿತಿಯಲ್ಲಿದ್ದರೂ ಕಾರ್ಯಾನುಷ್ಠಾನ ಜಾಗತಿಕ ಸಮಸ್ಯೆಗಳ ನಿವಾರಣಾ ಮಟ್ಟದ್ದಾಗಿರಬೇಕು, ನೂತನ ಶಿಕ್ಷಣ ನೀತಿಯಲ್ಲಿ ಕಲಿಕೆಯು ಪರೀಕ್ಷೆ ಬರೆಯುವುದಕ್ಕಷ್ಟೇ ಅಲ್ಲ, ಜ್ಞಾನ ಸಂಪಾದನೆಗೆ ಎಂದರು.

ಕಾಲೇಜಿನ ಚೇರ್ಮನ್ ಅಥಣಿ ಎಸ್. ವೀರಣ್ಣ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ ಬದಲಾಗುತ್ತಿರುವ ತಂತ್ರಜ್ಞಾನದ ಸವಾಲು ಎದುರಿಸಿ ಸಾಧನೆ ಮಾಡಲು ನಿತ್ಯ ಕಲಿಕೆ ಅವಶ್ಯ. ಪ್ರಸ್ತುತ ಔದ್ಯಮಿಕ ರಂಗವು ಗ್ರಾಹಕ ಪ್ರಧಾನವಾಗಿದ್ದು ಗ್ರಾಹಕರ ಅಭಿರುಚಿಯ, ಅಭಿವೃದ್ಧಿಯ ಅರಿವು ಅವಶ್ಯ ಎಂದರು.

ಪ್ರಾಧ್ಯಾಪಕ ವರ್ಗದ ನವೀನ್ ನಾಗರಾಜ್, ಸುಜಿತ್, ಪ್ರಕಾಶ್, ಡಾ. ಬಿ. ವೀರಪ್ಪ ಉಪಸ್ಥಿತರಿದ್ದರು.

ಕಾಲೇಜಿನ ನಿರ್ದೇಶಕ ಸ್ವಾಮಿ ತ್ರಿಭುವನಾನಂದ ಸ್ವಾಗತಿಸಿದರು. ನಂದಿನಿ ಪ್ರಾರ್ಥಿಸಿದರು. ಸುಹೇಲ್, ಕಿರಣ್ ನಿರೂಪಿಸಿದರು. ಕೃತಿ ವಂದಿಸಿದರು.

ಅಧಿಕಾರಿಗಳು ಸಾರ್ವಜನಿಕರ ಮನೆ ಬಾಗಿಲಿಗೆ ತೆರಳಿ ಅವರ ಸಮಸ್ಯೆ ಆಲಿಸುವ ದೃಷ್ಟಿಯಿಂದ ಜಿಲ್ಲಾಧಿಕಾರಿಗಳ ನಡೆ ಹಳ್ಳಿಯ ಕಡೆ ಎಂಬ ಕಾರ್ಯಕ್ರಮ ಹಮ್ಮಿಕೊಂಡಿದ್ದು ಇದೊಂದು ಅರ್ಥಪೂರ್ಣ ಕಾರ್ಯಕ್ರಮ.

• ಎಂ.ಪಿ.ರೇಣುಕಾಚಾರ್ಯ, ಶಾಸಕ

ಕನ್ನಡಪ್ರಭ
ಬುಧವಾರ 23.2.2022

## ದಾವಣಗೆರೆ ಜಿಲ್ಲೆ ಕೋವಿಡ್ ವರದಿ

ದಾವಣಗೆರೆ: ಜಿಲ್ಲೆಯಲ್ಲಿ ಮಂಗಳವಾರ 3 ಕೋವಿಡ್ ಪ್ರಕರಣಗಳು ದೃಢಪಟ್ಟಿದ್ದು, ಸೋಂಕಿನಿಂದ 7 ಜನರು ಗುಣಮುಖರಾಗಿ ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದಾರೆ. ಪ್ರಸ್ತುತ ಜಿಲ್ಲೆಯಲ್ಲಿ ಸಕ್ರೀಯ ಪ್ರಕರಣಗಳ ಸಂಖ್ಯೆ 71 ಇದ್ದು, ಯಾವುದೇ ಸಾವು ಸಂಭವಿಸಿರುವುದಿಲ್ಲ. ದಾವಣಗೆರೆತಾಲೂಕಿನಲ್ಲಿ 1 ಪಾಸಿಟಿವ್ ಕೇಸ್ ಬಂದಿದ್ದು, 3 ಜನರು ಗುಣಮುಖರಾಗಿ ಡಿಸ್ಚಾರ್ಜ್ ಆಗಿದ್ದಾರೆ. ಹರಿಹರ ಚನ್ನಗಿರಿಯಲ್ಲಿ ಯಾವುದೇ ಹೊಸ ಪ್ರಕರಣಗಳು ಇಲ್ಲ, ತಲಾ ಒಬ್ಬರು ಗುಣ ಮುಖವಾಗಿದ್ದಾರೆ. ಇತರೆ ಜಿಲ್ಲೆಗಳಿಂದ 2 ಕೇಸ್ ದಾಖಲು.

# ಐಸಿಟಿ ಕಂಪನಿಯೊಂದಿಗೆ ಒಪ್ಪಂದ

• **ಕನ್ನಡಪ್ರಭ ವಾರ್ತೆ** ದಾವಣಗೆರೆ

ವಿದ್ಯಾರ್ಥಿಗಳಿಗೆ ಶಿಕ್ಷಣದ ಜೊತೆಗೆ ಸಂವಹನಶೀಲತೆ ಅಗತ್ಯವಿರುವುದರಿಂದ ಬಿಐಇಟಿ ಕಾಲೇಜು ಐಸಿಟಿ ಕಂಪನಿಯೊಂದಿಗೆ ಅಸೋಸಿಯೇಟ್ ಸದಸ್ಯತ್ವ ಒಪ್ಪಂದ ಮಾಡಿಕೊಂಡಿದೆ ಎಂದು ಕಾಲೇಜಿನ ಪ್ರಾಚಾರ್ಯ ಡಾ.ಎಚ್.ಬಿ.ಅರವಿಂದ ತಿಳಿಸಿದ್ದಾರೆ.

ಇಂದಿನ ಹೊಸಯುಗ ಪ್ರತಿಕ್ಷಣ ಹೊಸದನ್ನೇ ಬಯಸುತ್ತದೆ ಮತ್ತು ವಿದ್ಯಾರ್ಥಿಗಳಲ್ಲಿ ಅಪಾರವಾದ ಸ್ಪರ್ಧೆಯನ್ನು ನಿರ್ಮಿಸಿದೆ. ಸ್ಪರ್ಧಾತ್ಮಕ ಯುಗಕ್ಕೆ ಹೊಂದಿಕೊಂಡು ಬದುಕನ್ನು ರೂಪಿಸಲು ವಿದ್ಯಾರ್ಥಿಗಳಿಗೆ ಕೇವಲ ಪರಿಶ್ರಮ, ಶಿಕ್ಷಣ ಸಾಲದಾಗಿದ್ದು, ಅದರ ಜತೆಗೆ ವಿದ್ಯಾರ್ಥಿಗಳು ಸಂವಹನಾಶೀಲತೆ, ಸಮಯ ನಿರ್ವಹಣಾ ಕೌಶಲ್ಯ, ತಂಡದೊಟ್ಟಿಗೆ ಕೆಲಸ ಮಾಡುವ ಕೌಶಲ್ಯ, ಒತ್ತಡನಿರ್ವಹಣಾ ಸಾಮರ್ಥ್ಯ ಇತ್ಯಾದಿ ಅನೇಕ ಪಠ್ಯೇತರ ಮೃದು ಕೌಶಲ್ಯಗಳನ್ನು ಬೆಳೆಸಿಕೊಳ್ಳುವ ಅಗತ್ಯವಿರುವದರಿಂದ ಐಸಿಟಿ ಅಕಾಡೆಮಿಯೊಂದಿಗೆ ಒಪ್ಪಂದ ಮಾಡಿಕೊಂಡಿದೆ ಎಂದು ಅವರು ತಿಳಿಸಿದರು.



ದಾವಣಗೆರೆಯ ಬಿಐಇಟಿ ಕಾಲೇಜು ಐಸಿಟಿ ಕಂಪನಿಯೊಂದಿಗೆ ಅಸೋಸಿಯೇಟ್ ಸದಸ್ಯತ್ವ ಒಪ್ಪಂದ ಮಾಡಿಕೊಂಡಿತು.

ಐಸಿಟಿ ಅಕಾಡೆಮಿಯು ಕಳೆದ 4 ವರ್ಷಗಳಿಂದ ನಮ್ಮ ಕಾಲೇಜಿನ ವಿದ್ಯಾರ್ಥಿಗಳಿಗಾಗಿ ಲರ್ನ್ ಥಾನ್, ಪವರ್ ಸೆಮಿನಾರ್, ವೆಬಿನಾರ್, ಸಾಂಘೀಕ ಚರ್ಚೆ ಇತ್ಯಾದಿಗಳ ಮೂಲಕ ಅನೇಕ ಮೃದು ಕೌಶಲ್ಯಗಳಲ್ಲಿ ತರಬೇತಿಯನ್ನು ನೀಡುತ್ತಿದೆ. ಈ ಹೊಸ ಒಪ್ಪಂದದಂತೆ ಇದರ ಜೊತೆಗೆ ವಿವಿಧ ಕಂಪನಿಗಳೊಡನೆ ಒಪ್ಪಂದ ಮಾಡಿಸಿ, ವಿದ್ಯಾರ್ಥಿಗಳಿಗೆ ಉನ್ನತ ತರಬೇತಿಯ ವ್ಯವಸ್ಥೆಯನ್ನು ಮಾಡಿ ಅವರ ಸರ್ವತೋಮುಖ ಬೆಳವಣಿಗೆಗೆ ಅನುವು ಮಾಡಿಕೊಡುತ್ತದೆ. ಈ ಒಪ್ಪಂದವು ಮುಂದಿನ 5 ವರ್ಷ ಜಾರಿಯಲ್ಲಿರುತ್ತದೆ ಎಂದವರು ಹೇಳಿದರು. ಐಸಿಟಿ ಕಂಪನಿಯ ರಾಜ್ಯ ಪ್ರಮುಖ ವಿಷ್ಣುಪ್ರಸಾದ್, ಕಂಪನಿಯ ಜಕಾವುಲ್ಲಾ, ಕಾಲೇಜಿನ ನಿರ್ದೇಶಕ ಪ್ರೊ.ವೈ.ವೃಷಭೇಂದ್ರಪ್ಪನವರು, ನಿಯೋಜನಾ ಡೀನ್ ಡಾ.ಸಿ.ಆರ್.ನಿರ್ಮಲ, ಕಾಲೇಜಿನ ವಿವಿಧ ವಿಭಾಗಗಳ ಮುಖ್ಯಸ್ಥರು ಹಾಜರಿದ್ದರು.

VACANCY

# ವಿದ್ಯಾರ್ಥಿಗಳಿಗೆ ಸಂವಹನಾಶೀಲತೆ ಅಗತ್ಯತೆ

## ಐಸಿಟಿ ಕಂಪನಿಯೊಂದಿಗೆ ಬಿಐಇಟಿ ಒಪ್ಪಂದ



ದಾವಣಗೆರೆ,ಫೆ.22 : ವಿದ್ಯಾರ್ಥಿಗಳಿಗೆ ಶಿಕ್ಷಣದ ಜೊತೆಗೆ ಸಂವಹನಶೀಲತೆ ಅಗತ್ಯವಿರುವುದರಿಂದ ಬಿಐಇಟಿ ಕಾಲೇಜು ಐಸಿಟಿ ಕಂಪನಿಯೊಂದಿಗೆ ಅಸೋಸಿಯೇಟ್ ಸದಸ್ಯತ್ವ ಒಪ್ಪಂದ ಮಾಡಿಕೊಂಡಿದೆ ಎಂದು ಕಾಲೇಜಿನ ಪ್ರಾಂಶುಪಾಲ ಡಾ॥ ಎಚ್.ಬಿ. ಅರವಿಂದ ತಿಳಿಸಿದ್ದಾರೆ.

ಇಂದಿನ ಹೊಸಯುಗ ಪ್ರತಿಕ್ಷಣ ಹೊಸದನ್ನೇ ಬಯಸುತ್ತದೆ ಮತ್ತು ವಿದ್ಯಾರ್ಥಿಗಳಲ್ಲಿ ಅಪಾರವಾದ ಸ್ಪರ್ಧೆಯನ್ನು ನಿರ್ಮಿಸಿದೆ. ಸ್ಪರ್ಧಾತ್ಮಕ ಯುಗಕ್ಕೆ ಹೊಂದಿಕೊಂಡು ಬದುಕನ್ನು ರೂಪಿಸಲು ವಿದ್ಯಾರ್ಥಿಗಳಿಗೆ ಕೇವಲ ಪರಿಶ್ರಮ, ಶಿಕ್ಷಣ ಸಾಲದಾಗಿದ್ದು, ಅದರ ಜತೆಗೆ ವಿದ್ಯಾರ್ಥಿಗಳು ಸಂವಹನಾಶೀಲತೆ, ಸಮಯ ನಿರ್ವಹಣಾ ಕೌಶಲ್ಯ, ತಂಡದೊಟ್ಟಿಗೆ ಕೆಲಸ ಮಾಡುವ ಕೌಶಲ್ಯ, ಒತ್ತಡ ನಿರ್ವಹಣಾ ಸಾಮರ್ಥ್ಯ ಇತ್ಯಾದಿ ಅನೇಕ ಪಠ್ಯೇತರ ಮೃದು ಕೌಶಲ್ಯಗಳನ್ನು ಬೆಳೆಸಿಕೊಳ್ಳುವ ಅಗತ್ಯವಿರುವುದರಿಂದ ಐಸಿಟಿ ಅಕಾಡೆಮಿಯೊಂದಿಗೆ ಒಪ್ಪಂದ ಮಾಡಿಕೊಂಡಿದೆ ಎಂದು ಅವರು ತಿಳಿಸಿದ್ದಾರೆ.

ಐಸಿಟಿ ಅಕಾಡೆಮಿಯು ಕಳೆದ ನಾಲ್ಕು ವರ್ಷಗಳಿಂದ ನಮ್ಮ ಕಾಲೇಜಿನ ವಿದ್ಯಾರ್ಥಿಗಳಿಗಾಗಿ ಲರ್ನ್ ಥಾನ್, ಪವರ್ ಸೆಮಿನಾರ್, ವೆಬಿನಾರ್, ಸಾಂಘಿಕ ಚರ್ಚೆ ಇತ್ಯಾದಿಗಳ ಮೂಲಕ ಅನೇಕ ಮೃದು ಕೌಶಲ್ಯಗಳಲ್ಲಿ ತರಬೇತಿಯನ್ನು ನೀಡುತ್ತಿದೆ. ಈ ಹೊಸ ಒಪ್ಪಂದದಂತೆ ಇದರ ಜೊತೆಗೆ ವಿವಿಧ ಕಂಪನಿಗಳೊಡನೆ ಒಪ್ಪಂದ ಮಾಡಿಸಿ, ವಿದ್ಯಾರ್ಥಿಗಳಿಗೆ ಉನ್ನತ ತರಬೇತಿಯ ವ್ಯವಸ್ಥೆಯನ್ನು ಮಾಡಿ ಅವರ ಸರ್ವತೋಮುಖ ಬೆಳವಣಿಗೆಗೆ ಅನುವು ಮಾಡಿಕೊಡುತ್ತದೆ. ಈ ಒಪ್ಪಂದವು ಮುಂದಿನ ಐದು ವರ್ಷ ಜಾರಿಯಲ್ಲಿರುತ್ತದೆ ಎಂದವರು ಹೇಳಿದ್ದಾರೆ.

ಒಪ್ಪಂದದ ವೇಳೆ ಐಸಿಟಿ ಕಂಪನಿಯ ರಾಜ್ಯ ಪ್ರಮುಖ ವಿಷ್ಣುಪ್ರಸಾದ್ ಹಾಗೂ ಕಂಪನಿಯ ಜಕಾವುಲ್ಲಾ ಕಾಲೇಜಿನ ನಿರ್ದೇಶಕ ಪ್ರೊ. ವೈ. ವೃಷಭೇಂದ್ರಪ್ಪ, ನಿಯೋಜನಾ ಡೀನ್ ಡಾ. ಸಿ.ಆರ್.ನಿರ್ಮಲ ಮತ್ತು ಕಾಲೇಜಿನ ವಿವಿಧ ವಿಭಾಗಗಳ ಮುಖ್ಯಸ್ಥರು ಹಾಜರಿದ್ದರು.

# ಐಸಿಟಿ ಕಂಪನಿ ಜೊತೆ ಬಿಐಇಟಿ ಒಪ್ಪಂದ

ಪ್ರಜಾವಾಣಿ ವಾರ್ತೆ

ದಾವಣಗೆರೆ: 'ವಿದ್ಯಾರ್ಥಿಗಳಿಗೆ ಶಿಕ್ಷಣದ ಜೊತೆಗೆ ಸಂವಹನಶೀಲತೆ ಅಗತ್ಯವಿರುವುದರಿಂದ ಬಿಐಇಟಿ ಕಾಲೇಜು ಐಸಿಟಿ ಕಂಪನಿ ಜೊತೆಗೆ ಅಸೋಸಿಯೇಟ್ ಸದಸ್ಯತ್ವ ಒಪ್ಪಂದ ಮಾಡಿಕೊಂಡಿದೆ' ಎಂದು ಕಾಲೇಜಿನ ಪ್ರಾಂಶುಪಾಲ ಡಾ.ಎಚ್.ಬಿ. ಅರವಿಂದ ತಿಳಿಸಿದ್ದಾರೆ.

'ಇಂದಿನ ಯುಗ ಪ್ರತಿಕ್ಷಣ ಹೊಸದನ್ನೇ ಬಯಸುತ್ತದೆ. ವಿದ್ಯಾರ್ಥಿಗಳಲ್ಲಿ ಅಪಾರವಾದ ಸ್ಪರ್ಧೆಯನ್ನು ನಿರ್ಮಿಸಿದೆ. ಸ್ಪರ್ಧಾತ್ಮಕ ಯುಗಕ್ಕೆ ಹೊಂದಿಕೊಂಡು ಬದುಕನ್ನು ರೂಪಿಸಲು ವಿದ್ಯಾರ್ಥಿಗಳಿಗೆ ಕೇವಲ ಪರಿಶ್ರಮ, ಶಿಕ್ಷಣ ಸಾಲದು. ಜೊತೆಗೆ ಸಂವಹನಾಶೀಲತೆ, ಸಮಯ ನಿರ್ವಹಣಾ ಕೌಶಲ, ತಂಡದೊಟ್ಟಿಗೆ ಕೆಲಸ ಮಾಡುವ ಕೌಶಲ, ಒತ್ತಡ ನಿರ್ವಹಣಾ ಸಾಮರ್ಥ್ಯ ಸೇರಿ ಅನೇಕ ಪಠ್ಯೇತರ ಮೃದು ಕೌಶಲಗಳನ್ನು ಬೆಳೆಸಿಕೊಳ್ಳುವ ಅಗತ್ಯವಿದೆ. ಹೀಗಾಗಿ ಐಸಿಟಿ ಅಕಾಡೆಮಿ ಜೊತೆಗೆ ಒಪ್ಪಂದ ಮಾಡಿಕೊಳ್ಳಲಾಗಿದೆ' ಎಂದು ಅವರು ತಿಳಿಸಿದ್ದಾರೆ.

ಐಸಿಟಿ ಅಕಾಡೆಮಿಯು ನಾಲ್ಕು ವರ್ಷಗಳಿಂದ ಕಾಲೇಜಿನ ವಿದ್ಯಾರ್ಥಿಗಳಿಗಾಗಿ ಲರ್ನ್ ಥಾನ್, ಪವರ್ ಸೆಮಿನಾರ್, ವೆಬಿನಾರ್, ಸಾಂಘಿಕ ಚರ್ಚೆ ಮೂಲಕ ಅನೇಕ ಮೃದು ಕೌಶಲಗಳ ಬಗ್ಗೆ ತರಬೇತಿ ನೀಡುತ್ತಿದೆ. ಹೊಸ ಒಪ್ಪಂದದಂತೆ ವಿವಿಧ ಕಂಪನಿಗಳೊಡನೆ ಒಪ್ಪಂದ ಮಾಡಿಸಿ, ವಿದ್ಯಾರ್ಥಿಗಳಿಗೆ ಉನ್ನತ ತರಬೇತಿಯ ವ್ಯವಸ್ಥೆಯನ್ನು ಮಾಡಿ ಅವರ ಸರ್ವತೋಮುಖ ಬೆಳವಣಿಗೆಗೆ ಅನುವು ಮಾಡಿಕೊಡುತ್ತದೆ. ಈ ಒಪ್ಪಂದವು ಮುಂದಿನ ಐದು ವರ್ಷ ಜಾರಿಯಲ್ಲಿರುತ್ತದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಒಪ್ಪಂದದ ವೇಳೆ ಐಸಿಟಿ ಕಂಪನಿಯ ರಾಜ್ಯ ಪ್ರಮುಖ ವಿಷ್ಣು ಪ್ರಸಾದ್ ಹಾಗೂ ಕಂಪನಿಯ ಜಕಾವುಲ್ಲಾ, ಕಾಲೇಜಿನ ನಿರ್ದೇಶಕ ಪ್ರೊ. ವೈ. ವೃಷಭೇಂದ್ರಪ್ಪ, ನಿಯೋಜನಾ ಡೀನ್ ಡಾ.ಸಿ.ಆರ್.ನಿರ್ಮಲ ಮತ್ತು ಕಾಲೇಜಿನ ವಿವಿಧ ವಿಭಾಗಗಳ ಮುಖ್ಯಸ್ಥರು ಹಾಜರಿದ್ದರು.

# ಬಿಐಟಿ-ಐಸಿಟಿ ನಡುವೆ ಒಪ್ಪಂದ




ದಾವಣಗೆರೆ: ವಿದ್ಯಾರ್ಥಿಗಳು ಸಂವಹನಾ ಶೀಲತೆ, ಸಮಯ ನಿರ್ವಹಣಾ ಕೌಶಲ್ಯ ಒಟ್ಟಾಗಿ ತಂಡದಲ್ಲಿ ಕೆಲಸಮಾಡುವ ಕೌಶಲ್ಯ, ಒತ್ತಡ ನಿರ್ವಹಣಾ ಸಾಮರ್ಥ್ಯ ಇತ್ಯಾದಿ ಅನೇಕ ಪಠ್ಯೇತರ ಮೃದು ಕೌಶಲ್ಯ ಬೆಳೆಸುವ ಉದ್ದೇಶದಿಂದ ಬಿಐಇಟಿ ಕಾಲೇಜು ಮತ್ತು ಐಸಿಟಿ ಕಂಪನಿ ಒಪ್ಪಂದ ಮಾಡಿಕೊಂಡಿವೆ. ಈ ವೇಳೆ ಬಿಐಇಟಿ ಕಾಲೇಜಿನ ಪ್ರಾಂಶುಪಾಲ ಡಾ. ಎಚ್.ಬಿ. ಅರವಿಂದ, ಐಸಿಟಿ ಕಂಪನಿಯ ರಾಜ್ಯ ಪ್ರಮುಖ ವಿಷ್ಣುಪ್ರಸಾದ್, ಜಕಾವುಲ್ಲಾ ಅವರು ಒಪ್ಪಂದಕ್ಕೆ ಸಹಿ ಮಾಡಿದರು. ಐಸಿಟಿ ಅಕಾಡೆಮಿಯು ಕಳೆದ ನಾಲ್ಕು ವರ್ಷಗಳಿಂದ ಬಿಐಇಟಿ ವಿದ್ಯಾರ್ಥಿಗಳಿಗಾಗಿ ಲರ್ನ್‌ಥಾನ್, ಪವರ್ ಸೆಮಿನಾರ್, ವೆಬಿನಾರ್, ಸಾಂಘಿಕ ಚರ್ಚೆ ಇತ್ಯಾದಿಗಳ ಮೂಲಕ ಅನೇಕ ಮೃದು ಕೌಶಲ್ಯಗಳಲ್ಲಿ ತರಬೇತಿ ನೀಡುತ್ತಿದೆ. ಈ ಹೊಸ ಒಪ್ಪಂದದಂತೆ ಐಸಿಟಿ ಕಂಪನಿಯು ಈ ಎಲ್ಲಾ ಕಾರ್ಯಕ್ರಮಗಳ ಜೊತೆಗೆ ವಿದ್ಯಾರ್ಥಿಗಳಿಗೆ ಉನ್ನತ ತರಬೇತಿಯ ವ್ಯವಸ್ಥೆ ಮಾಡಿ ಅವರ ಸರ್ವತೋಮುಖ ಬೆಳವಣಿಗೆಗೆ ಅನುವು ಮಾಡಿಕೊಡುತ್ತದೆ. ಈ ಒಪ್ಪಂದವು ಮುಂದಿನ ಐದು ವರ್ಷ ಜಾರಿಯಲ್ಲಿರುತ್ತದೆ. ಅಲ್ಲದೇ ಐಸಿಟಿ ಕಂಪನಿಯು ಬಿಐಇಟಿ ವಿದ್ಯಾರ್ಥಿಗಳಿಗೆ ನೇಮಕಾತಿ ಪ್ಲಾಟ್ ಫಾರಂ ಒದಗಿಸಿದೆ. ಈಗಾಗಲೇ ಸುಮಾರು 100 ವಿದ್ಯಾರ್ಥಿಗಳು ಪ್ರತಿಷ್ಠಿತ ಕಂಪನಿಗಳಲ್ಲಿ ನೇಮಕಾತಿ ಹೊಂದಲು ನೆರವಾಗಿದೆ. ಈ ಸಂದರ್ಭದಲ್ಲಿ ಬಿಐಇಟಿ ನಿರ್ದೇಶಕ ಪ್ರೊ. ವೈ. ವೃಷಭೇಂದ್ರಪ್ಪ, ನಿಯೋಜನಾ ಡೀನ್ ಡಾ. ಸಿ. ಆರ್. ನಿರ್ಮಲಾ ಇದ್ದರು.

# ಬಿಐಇಟಿ ಸದಸ್ಯತ್ವ ಒಪ್ಪಂದ

**ದಾವಣಗೆರೆ:** ವಿದ್ಯಾರ್ಥಿಗಳಿಗೆ ಶಿಕ್ಷಣದ ಜತೆ ಸಂವಹನಶೀಲತೆ ಅಗತ್ಯವಿರುವ ಕಾರಣ ನಗರದ ಬಿಐಇಟಿ



ಕಾಲೇಜು, ಐಸಿಟಿ ಕಂಪನಿಯೊಂದಿಗೆ ಅಸೋಸಿಯೇಟ್ ಸದಸ್ಯತ್ವ ಒಪ್ಪಂದ ಮಾಡಿಕೊಂಡಿದೆ ಎಂದು ಕಾಲೇಜಿನ ಪ್ರಾಂಶುಪಾಲ ಡಾ.ಎಚ್.ಬಿ. ಅರವಿಂದ ತಿಳಿಸಿದ್ದಾರೆ. ಈ ಕುರಿತು ಪತ್ರಿಕಾ ಪ್ರಕರಣೆ ನೀಡಿ, ಸ್ಪರ್ಧಾತ್ಮಕ ಯುಗದಲ್ಲಿ ಕೇವಲ ಪರಿಶ್ರಮ, ಶಿಕ್ಷಣದಿಂದ ಬದುಕು ರೂಪಿಸಿಕೊಳ್ಳಲು ಸಾಧ್ಯವಿಲ್ಲ. ವಿದ್ಯಾರ್ಥಿಗಳು ಸಂವಹನ, ಸಮಯ ನಿರ್ವಹಣೆ, ತಂಡದೊಟ್ಟಿಗೆ ಕೆಲಸ ಮಾಡುವ ಕೌಶಲ್ಯ, ಒತ್ತಡ ನಿರ್ವಹಣಾ ಸಾಮರ್ಥ್ಯ ರೀತಿಯ ಪಠ್ಯೇತರ ಕೌಶಲ್ಯ ಬೆಳೆಸಿಕೊಳ್ಳುವ ಅಗತ್ಯವಿದೆ. ಈ ನಿಟ್ಟಿನಲ್ಲಿ ಐಸಿಟಿ ಅಕಾಡೆಮಿ ಜತೆ ಒಪ್ಪಂದ ಮಾಡಿಕೊಳ್ಳಲಾಗಿದೆ ಎಂದಿದ್ದಾರೆ. ಹೊಸ ಒಪ್ಪಂದದಂತೆ ಐಸಿಟಿ ಅಕಾಡೆಮಿಯು ವಿವಿಧ ಕಂಪನಿಗಳೊಂದಿಗೆ ಒಪ್ಪಂದ ಮಾಡಿಸಿ, ವಿದ್ಯಾರ್ಥಿಗಳಿಗೆ ಉನ್ನತ ತರಬೇತಿ ವ್ಯವಸ್ಥೆ ಮಾಡಿ, ಅವರ ಸರ್ವತೋಮುಖ ಬೆಳವಣಿಗೆಗೆ ಅನುವು ಮಾಡಿಕೊಡುತ್ತದೆ. ಒಪ್ಪಂದದ ವೇಳೆ ಐಸಿಟಿ ರಾಜ್ಯ ಪ್ರಮುಖ ವಿಷ್ಣುಪ್ರಸಾದ್, ಜಕಾವುಲ್ಲಾ, ಬಿಐಇಟಿ ನಿರ್ದೇಶಕ ಪ್ರೊ.ವೈ. ವೃಷಭೇಂದ್ರಪ್ಪ, ನಿಯೋಜನಾ ಡೀನ್ ಡಾ.ಸಿ.ಆರ್. ನಿರ್ಮಲಾ ಹಾಜರಿದ್ದರು.

ಬರುವ ಒಟ್ಟು ಹಣ (4)

ಪದಾವಳಿ 3572ರ ಉತ್ತರ

(ನಾಳಿನ ಅಂತರಂಗದಲ್ಲಿ: ಸ್ವಾಮಿ ಆದಿತ್ಯಾನಂದ ಸರಸ್ವತೀ, ಚಿನ್ಮಯ ಮಿಷನ್, ಮಂಡ್ಯ )

# ಐಸಿಟಿ ಕಂಪನಿ ಜತೆ ಬಿಐಇಟಿ ಕಾಲೇಜು ಒಪ್ಪಂದ

■ ವಿಜಯವಾಣಿ ಸುದ್ದಿಜಾಲ ದಾವಣಗೆರೆ

ವಿದ್ಯಾರ್ಥಿಗಳಲ್ಲಿ ಸಂವಹನಶೀಲತೆ ಅನೇಕ ಪಠ್ಯೇತರ ಮೃದು ಕೌಶಲಗಳನ್ನು ಬೆಳೆಸುವ ಹಿನ್ನೆಲೆಯಲ್ಲಿ ದಾವಣಗೆರೆಯ ಬಿಐಇಟಿ ಕಾಲೇಜು ಐಸಿಟಿ ಕಂಪನಿಯೊಂದಿಗೆ ಅಸೋಸಿಯೇಟ್ ಸದಸ್ಯತ್ವದ ಒಪ್ಪಂದ ಮಾಡಿಕೊಂಡಿದೆ.

ಐಸಿಟಿ ಕಂಪನಿಯ ರಾಜ್ಯ ಪ್ರಮುಖ ವಿಷ್ಣುಪ್ರಸಾದ್, ಕಂಪನಿಯ ಪ್ರತಿನಿಧಿ ಜಕಾವುಲ್ಲಾ ಅವರೊಂದಿಗೆ ಪ್ರಾಂಶುಪಾಲ ಡಾ.ಎಚ್.ಬಿ. ಅರವಿಂದ ಒಪ್ಪಂದ ಪತ್ರ ವಿನಿಮಯ ಮಾಡಿಕೊಂಡರು. ಈ ಸಂದರ್ಭದಲ್ಲಿ ಕಾಲೇಜಿನ ನಿರ್ದೇಶಕ ಪ್ರೊ. ವೈ. ವೃಷಭೇಂದ್ರಪ್ಪ, ನಿಯೋಜಿತ ಡೀನ್ ಡಾ. ಸಿ.ಆರ್.ನಿರ್ಮಲಾ, ಕಾಲೇಜಿನ ವಿವಿಧ ವಿಭಾಗಗಳ ಮುಖ್ಯಸ್ಥರು ಇದ್ದರು.

ಐಸಿಟಿ ಅಕಾಡೆಮಿಯು ನಾಲ್ಕು ವರ್ಷಗಳಿಂದ ಲರ್ನ್ ಥಾನ್, ಪವರ್ ಸೆಮಿನಾರ್, ವೆಬಿನಾರ್, ಸಾಂಘಿಕ ಚರ್ಚೆ ಇತ್ಯಾದಿಗಳ ಮೂಲಕ ಅನೇಕ ಮೃದು ಕೌಶಲಗಳಲ್ಲಿ ತರಬೇತಿ ನೀಡುತ್ತಿದೆ. ಹೊಸ ಒಪ್ಪಂದದಂತೆ ಇದರ ಜತೆಯಲ್ಲಿ ವಿವಿಧ ಕಂಪನಿಗಳೊಡನೆ ಒಪ್ಪಂದ ಮಾಡಿಸಿ, ವಿದ್ಯಾರ್ಥಿಗಳಿಗೆ ಉನ್ನತ ತರಬೇತಿ ವ್ಯವಸ್ಥೆ ಮಾಡಲಿದೆ. ಮುಂದಿನ ಐದು ವರ್ಷ ಒಪ್ಪಂದ ಜಾರಿಯಲ್ಲಿರುತ್ತದೆ ಎಂದು ಪ್ರಾಂಶುಪಾಲ ಡಾ.ಎಚ್.ಬಿ. ಅರವಿಂದ ತಿಳಿಸಿದ್ದಾರೆ.



ದಾವಣಗೆರೆಯ ಬಿಐಇಟಿ ಕಾಲೇಜು ಐಸಿಟಿ ಕಂಪನಿಯೊಂದಿಗೆ ಅಸೋಸಿಯೇಟ್ ಸದಸ್ಯತ್ವದ ಒಪ್ಪಂದ ಮಾಡಿಕೊಂಡಿದ್ದು ಕಾಲೇಜು ಪ್ರಾಚಾರ್ಯ ಡಾ.ಎಚ್.ಬಿ.ಅರವಿಂದ್, ಕಂಪನಿಯ ರಾಜ್ಯ ಪ್ರಮುಖ ವಿಷ್ಣುಪ್ರಸಾದ್ ಹಾಗೂ ಪ್ರತಿನಿಧಿ ಜಕಾವುಲ್ಲಾ ಅವರೊಂದಿಗೆ ಒಪ್ಪಂದ ಪತ್ರ ವಿನಿಮಯ ಮಾಡಿಕೊಂಡರು.ನಿಯೋಜಿತ ಡೀನ್ ಡಾ. ಸಿ.ಆರ್.ನಿರ್ಮಲಾ ಇದ್ದರು.